(ಇಂದು ದಿನಾಂಕ 10-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ವಿ.ಜಿ.ಎಚ್. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ 2 ನೇ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಹಕ್ಕು ಬದಲಾವಣೆ ವಹಿಯ ದೃಢೀಕೃತ ಪ್ರತಿಯನ್ನು ನಿ.ಪಿ.1 ಎಂದು, ದಾವಾ 'ಅ' ಅನುಸೂಚಿಯ 1 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.2 ಎಂದು, ದಾವಾ 'ಅ' ಅನುಸೂಚಿಯ 2 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.3 ಎಂದು, ದಾವಾ 'ಅ' ಅನುಸೂಚಿಯ 4 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.4 ಎಂದು, ದಾವಾ 'ಅ' ಅನುಸೂಚಿಯ 5 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.5 ಎಂದು, ದಾವಾ 'ಅ' ಅನುಸೂಚಿಯ 6 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.6 ಎಂದು, ದಾವಾ 'ಅ' ಅನುಸೂಚಿಯ 7 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.7 ಎಂದು, ದಾವಾ 'ಅ' ಅನುಸೂಚಿಯ 8 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.8 ಎಂದು, ದಾವಾ 'ಅ' ಅನುಸೂಚಿಯ 9 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ.9 ಎಂದು, ದಾವಾ 'ಅ'ಅನುಸೂಚಿಯ 10 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಪಿ. 10 ಎಂದು, 2 ಕರ ಪಾವತಿ ರಶೀದಿಯ ಕಾರ್ಬನ್ ಪ್ರತಿಗಳನ್ನು ನಿ.ಪಿ.11 ಮತ್ತು 12 ಎಂದು, ಸ.ನಂ. 12/5 ರ ಪಹಣಿಪತ್ರಿಕೆಯ ದೃಢೀಕೃತ ಪ್ರತಿಯನ್ನು ನಿ.ಪಿ.13 ಎಂದು, ಸ.ನಂ. 13/1 ರ ಪಹಣಿಪತ್ರಿಕೆಯನ್ನು ನಿ.ಪಿ.14 ಎಂದು, ಸ.ನಂ. 62/3 ರ ಪಹಣಿಪತ್ರಿಕೆಯನ್ನು ನಿ.ಪಿ.15 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ